ಇನ್ನೊಂದು ವಿಚಾರ ಹೇಳಿದರು. ಅದನೆಂದರೆ, ಸರ್ಕಾರದ ವಿವಿಧ ಇಲಾಖೆಗಳಲ್ಲಿ ಖಾಲಿ ಇರತಕ್ಕ ೧ ಲಕ್ಷದ ೫ ಸಾವಿರ ಸ್ಥಾನಗಳು ಏನು ಇದೆ, ಅವುಗಳೆಲ್ಲವನ್ನೂ ೬ ತಿಂಗಳಲ್ಲಿ ಭರ್ತಿ ಮಾಡಬೇಕು, ಆ ಬಗ್ಗೆ ಆಶ್ವಾಸನೆಯನ್ನು ಮಾನ್ಯ ಮುಖ್ಯ ಮಂತ್ರಿಗಳೇ ಇಲ್ಲಿಗೆ ಬಂದು ಕೊಡಬೇಕೆಂದು ತಿಳಿಸಿದರು. ಅದಕ್ಕೆ ನಾನು ಮಂಖ್ಯಮಂತ್ರಿಗಳಿಗೆ ಬೇರೆ ಬೇರೆ ಕೆಲಸಕಾರ್ಯಗಳು ಇರುತ್ತವೆ ಅವರೇ ಬಂದು ಆಶ್ವಾಸನೆಯನ್ನು ಕೊಡುವುದಕ್ಕೆ ಕಷ್ಟವಾಗಬಹುದು. ಆದರೆ ನೀವು ಏನು ಹೇಳುತ್ತೀರಿ ಅದನ್ನು ಮಾನ್ಯ ಮುಖ್ಯ ಮಂತ್ರಿಗಳ ಗಮನಕ್ಕೆ ತರುತ್ತೇನೆಂದು ಹೇಳಿ ಬಂದಿದ್ದೇನೆ.

ಮಂತ್ರಿ ಅವರಿಂದ ನಿಮಗೆ ಒಂದು ಕಾಗದವನ್ನು ಬರೆಯಿಸುತ್ತೇನೆ ಎಂದು ಹೇಳಿದೆ, ಆ ನಂತರ ಮಾನ್ಯ ಮುಖ್ಯ ಮಂತ್ರಿಗಳವರೂ ಪತ್ರ ಬರೆದು ವಿದ್ಯಾರ್ಥಿಗಳಲ್ಲಿ ಮನವಿ ಮಾಡಿಕೊಂಡಿದ್ದಾರೆ, ಬಹುಶಃ ನಿವೃತ್ತಿ ವಯಸ್ಸನ್ನು ೫೮ ರಿಂದ ೫೫ಕ್ಕೆ ಇಳಿಸಿರತಕ್ಕದ್ದು ೨ ರಾಜ್ಯಗಳಲ್ಲಿ ಬಿಟ್ಟು ಎಲ್ಲಾ ರಾಜ್ಯದಲ್ಲೂ ಕೂಡಾ ೫೮ ವರ್ಷವೇ ಇರುತ್ತದೆಯಾದ್ದರಿಂದ ಕಡಿಮೆ ಮಾಡುವುದಕ್ಕೆ ಆಗಂವುದಿಲ್ಲವೆಂದು ಹೇಳಿರುತ್ತಾರೆ. ಮಂತ್ರಿ ಖಾಲಿ ಇರತಕ್ಕ ಸ್ಥಾನಗಳ ಬಗ್ಗೆ ಹೇಳಬೇಕೆಂದರೆ, ಕೇಂದ್ರದ ಯೋಜನಾ ಕಮಿಷಷನರ್‌ರವರು ವಾರ್ಷಿಕ ಆದಾಯ ಹೆಚ್ಚು ಮಾಡಿಕೊಳ್ಳುವುದಕ್ಕೆ ಯಾವ ಯಾವ ಸಂಪನ್ಮೂಲಗಳನ್ನು ತೋರಿಸುತ್ತೀರಿ ಎಂದಾಗ ಈ ಸ್ಥಾನಗಳನ್ನು ಭರ್ತಿ ಮಾಡುವುದಿಲ್ಲವೆಂದು ಹೇಳಿದೆವು ಈಗ ನಮಗೆ ೯೦೦ ಕೋಟಿ ರೂಪಾಯಿಗಳು ಬಂದಿದೆ, ಇನ್ನು ಮೇಲೆ ಆ ಸ್ಥಾನಮಾನಗಳನ್ನು ಭರ್ತಿ ಮಾಡುವುದಕ್ಕೆ ಕ್ರಮ ತೆಗೆದುಕೊಂಡಿದ್ದೇವೆ. ಲೋಕಸೇವಾ ಆಯೋಗದವರಿಗೂ ಇದರ ಬಗ್ಗೆ ತಿಳಿಸಿದ್ದೇವೆ. ಮತ್ತೆ ಬೇರೆ ಬೇರೆ ಇಲಾಖಾ ನೇಮಕಾತಿ ಸಮಿತಿಗಳು ಏನಿವೆ ಅವೂ ಕೂಡಾ ಕೆಲಸ ಮಾಡುವುದಕ್ಕೆ ಅವಕಾಶ ಮಾಡಿದ್ದೇವೆ. ಆದ್ದರಿಂದ, ಅವರು ಕೇಳಿರತಕ್ಕ ವಿಷಯದ ಬಗ್ಗೆ ಗಮನ ಹರಿಸಿರುವುದರಿಂದ ತಮ್ಮ ಬೇಡಿಕೆಗಳನ್ನು ಪಾಪಸ್ಸು ತೆಗೆದುಕೊಂಡು ವಿದ್ಯಾರ್ಥಿಗಳು ಶಾಲಾ ಕಾಲೇಜುಗಳಿಗೆ ಹೋಗಬೇಕೆಂದು ವಿನಂತಿಸಿಕೊಳ್ಳುತ್ತೇನೆ. ಈ ಬಗ್ಗೆ ಜಿಲ್ಲಾಧಿಕಾರಿಗಳ ಮೂಲಕ ವಿಷಯ ತಿಳಿಸಿದ್ದೇವೆ. ದಯಮಾಡಿ ಈ ಸಭೆಯ ಮೂಲಕ ವಿದ್ಯಾರ್ಥಿಗಳಿಗೆ ಮನವಿ ಮಾಡಿಕೊಳ್ಳುತ್ತೇನೆ, ದಯವಮಾಡಿ ಅವರು ಶಾಲಾ ಕಾಲೇಜುಗಳಿಗೆ ಹೋಗಬೇಕು ಮಾನ್ಯ ಮುಖ್ಯ ಮಂತ್ರಿಯವರ ಮನವಿಗೆ ಮನ್ನಣೆ ಕೊಡಬೇಕೆಂದು ಹೇಳುತ್ತೇನೆ.

೩) ಮಂಳಂಗಡೆಯಾಗಲಿರುವ ಬಾಗಲಕೋಟೆಯನ್ನು ಪುನರ್ ನಿರ್ಮಾಣ ಮಾಡುವುದು.

ಶ್ರೀ ಜಿ. ವಿ. ಮಂಟೂರ್.—ಸನ್ಮಾನ್ಯ ಅಧ್ಯಕ್ಷರೇ, ಎಂದೋ ಜಿಲ್ಲಾ ಕೇಂದ್ರವಾಗಬೇಕಾಗಿದ್ದ ಬಾಗಲಕೋಟೆ ನಗರವು ಇಂದು ಮುಳಂಗಬೇಕಾದ ದುರ್ಧರ ಪ್ರಸಂಗ ಬಂದುದಕ್ಕೆ ವಿಷಾಧಿಸುತ್ತೇನೆ. ಬಾಗಲಕೋಟೆಯು ೧೯೬೩ ರಿಂದ ಮುಳಂಗಡೆ ಮತ್ತು ಅದಕ್ಕೆ ಪ್ರತಿಯಾಗಿ ಹೊಸ ವರ್ಷ ಕಟ್ಟುವ ಮಾತುಗಳು ಕೇಳಿ ಬರುತ್ತಿವೆ. ಬಾಗಲಕೋಟೆ ಐತಿಹಾಸಿಕ ನಗರ. ಆದಿಲ್‌ಶಾಹಿ ಕಾಲದಲ್ಲಿ ಅದು ಬಾಂಗಡಿಕೋಟೆಯಾಗಿತ್ತು. ನಮ್ಮ ಸರ್ಕಾರ ಬಂದಮೇಲೆ ಬಾಗಲಕೋಟೆ ಅಭಿವೃದ್ಧಿ ಪ್ರಾಧಿಕಾರವೇನೋ ಅಸ್ತಿತ್ವಕ್ಕೆ ಬಂದಿದೆ. ಆದರೆ ಅಷ್ಟರಿಂದ ಜನರಿಗೆ ಸಮಾಧಾನವಾಗುವುದಿಲ್ಲ.

ಇತ್ತೀಚೆಗೆ ಚಾರ್ಲಸ್ ಕೋರಿಯಾ ಎಂಬ ತಜ್ಞರನ್ನು ಅಲ್ಲಿಗೆ ಕರೆಯಿಸಲಾಗಿತ್ತು. ಅವರು ಕೆಲವು ದಿನ ಬಾಗಲಕೋಟೆಯಲ್ಲಿದ್ದು ಸ್ಥಳ ಪರಿಶೀಲನೆ ಮಾಡಿದ್ದಾರೆ. ಹೊಸಬಾಗಲಕೋಟೆಯನ್ನು ಕಟ್ಟಲು ೭೦೦೦ ಎಕರ ಜಮೀನು ಸ್ವಾಧೀನಪಡಿಸಿಕೊಳ್ಳಲಾಗಿದೆ. ಆದರೆ ಚಾರ್ಲಸ್ ಕೋರಿಯಾ ಶಿಫಾರಸ್ಸು ಮಾಡಿದ್ದು ಪ್ರತಿಯೊಬ್ಬರಿಗೆ ೨೦ ಘೂಟು ಆಗಲ ೩೦ ಘೂಟು ಉದ್ದದ ನಿವೇಶನ ಕೊಡಬೇಕೆಂದು ವರದಿ ಸಲ್ಲಿಸಿದ್ದು ಇದರಿಂದ ಬಾಗಲಕೋಟೆ ನಾಗರೀಕರಲ್ಲಿ ಅಸಮಾಧಾನವುಂಟಾಗಿದೆ. ಏನಿದ್ದರೂ ಹೊಸ ಬಾಗಲಕೋಟೆಯ ನಿರ್ಮಾಣ ಕಾರ್ಯದಲ್ಲಿ ಭಾರೀ ವಿಳಂಬವಾಗಿ ಜನರಲ್ಲಿ ಅನಿಶ್ಚಿತತೆ ತಲೆದೋರಿದೆ. ಕಾರಣ ಬಾಗಲಕೋಟೆ ನಗರದ ಪುನರ್ ನಿರ್ಮಾಣದ ದಿಸೆಯಲ್ಲಿ ಅತ್ಯಂತ ತೀವ್ರಕ್ರಮ ಕೈಗೊಳ್ಳಬೇಕೆಂದು ನಾನು ತಮ್ಮ ಮೂಲಕ ಮಾನ್ಯ ಮುಖ್ಯ ಮಂತ್ರಿಗಳ ಗಮನ ಸೆಳೆಯಬಯಸುತ್ತೇನೆ.

ಶ್ರೀ ಎಚ್. ಡಿ. ದೇವೇಗೌಡ.—ಸನ್ಮಾನ್ಯ ಸದಸ್ಯರು ಗಮನ ಸೆಳೆದಿದ್ದಾರೆ. ಇದರ ಬಗ್ಗೆ ತೀವ್ರ ಗಮನ ಕೊಡುತ್ತೇನೆ.